# ಶ್ರೀಮಾ ಶಾರದಾ ದರ್ಶನ ಚಿತ್ರಪ್ರದರ್ಶನದ ಉದ್ಘಾಟನೆ.

"ಶ್ರೀ ಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣ ಪರಮಹಂಸರ ಉಪದೇಶಗಳನ್ನು ತಮ್ಮ ಬಾಳಿನಲ್ಲಿ ಬದುಕಿ ಅವುಗಳ ಜೀವಂತ ನಿದರ್ಶನವಾಗಿದ್ದರು. ಬಾಹ್ಯದಲ್ಲಿ ಅತ್ಯಂತ ನಿರಾಡಂಬರದಿಂದಿದ್ದ ಅವರು ತಮ್ಮ ಅಂತರಂಗದಿಂದ ಅದ್ಭುತವಾದ ಶಾಂತಿಯನ್ನು ಹೊರಸೂಸುತ್ತಿದ್ದರು. ಬದುಕಿನ ದ್ವಂದ್ವಗಳನ್ನು ಅಪೂರ್ವವಾದ ರೀತಿಯಲ್ಲಿ ಸಮನ್ವಯಗೊಳಿಸಿಕೊಂಡಿದ್ದರು" ಎಂದು ರಾಜ್ಯಪಾಲರಾದ ಮಾನ್ಯ ಶ್ರೀಚತುರ್ವೇದಿಯವರು ಶ್ರೀರಾಮಕೃಷ್ಣ ಆಶ್ರಮದ ಸಾರ್ವಜನಿಕ ಸಭೆಯಲ್ಲಿ, ಶ್ರೀಮಾತೆ ಶಾರದಾದೇವಿಯರ ೧೫೦ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಹೊರತಂದಿರುವ ಚಿತ್ರಪ್ರದರ್ಶನವನ್ನು ಉದ್ಘಾಟಿಸುತ್ತಾ ನುಡಿದರು.



*ಜ್ಯೋತಿ ಬೆಳಗಿ ಚಿತ್ರಪ್ರದರ್ಶನ ಉದ್ಘಾಟಿಸುತ್ತಿರುವ ಮಾನ್ಯ ರಾಜ್ಯಪಾಲರು. ಎಡದಿಂದ ,ಸ್ವಾಮಿ ಸುರೇಶಾನಂದಜಿ, ಸ್ವಾಮಿ ಆತ್ಮವಿದಾನಂದಜಿ ಮತ್ತು ಸ್ವಾಮಿ ಪರಹಿತಾನಂದಜಿ.*

ಆಶ್ರಮದ ಗ್ರಂಥಾಲಯದಲ್ಲಿ ಏರ್ಪಡಿಸಿದ್ದ ಚಿತ್ರಪ್ರದರ್ಶನವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ "ಶ್ರೀಮಾತೆಯವರ ಜೀವನ ಸಂದೇಶಗಳನ್ನು ನಿದರ್ಶಿಸುವ ಈ ಚಿತ್ರಪ್ರದರ್ಶನ ಅವರ ವ್ಯಕ್ತಿತ್ವದ ಗಾಢ ಪ್ರಭಾವವನ್ನು ತಿಳಿಸುವುದೇ ಅಲ್ಲದೆ ಅವರು ಬದುಕಿ ಬಾಳಿದ ಮೌಲ್ಯಗಳನ್ನು ಸಮರ್ಥವಾಗಿ ನಿರೂಪಿಸುತ್ತದೆ" ಎಂದರು. ಅದಲ್ಲದೆ ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ ಅವರು ರಾಮಕೃಷ್ಣ ಮಿಷನ್ನಿನ ಪರಮಾಧ್ಯಕ್ಷರಾದ ಸ್ವಾಮಿ ರಂಗನಾಥಾನಂದಜಿಯವರ ಕೃತಿಯ ಕನ್ನಡಾನುವಾದ "ಆದರ್ಶ ನಾಗರಿಕ" ಎಂಬ ಕಿರುಹೊತ್ತಗೆಯನ್ನು ಬಿಡುಗಡೆ ಮಾಡಿದರು. ಅನುವಾದವನ್ನು ಪ್ರಸಿದ್ಧ ಸಾಹಿತಿಗಳಾದ ಕೋ. ಚೆನ್ನಬಸಪ್ಪನವರು ಮಾಡಿದ್ದಾರೆ. ಈ ಕೃತಿಯ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ ಮಾನ್ಯ ರಾಜ್ಯಪಾಲರು "ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಅವರಿಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ ಆತಂಕ ಇತ್ತು, ಅದರ ಪುನರುತ್ಥಾನಕ್ಕಾಗಿ ಹಲವಾರು ಕಡೆ ಆದರ್ಶ ನಾಗರೀಕನಾಗುವುದು ಹೇಗೆ ಎನ್ನುವ ಬಗ್ಗೆ ಪ್ರವಚನಗಳನ್ನು ನೀಡಿದ್ದಾರೆ. ಒಬ್ಬನು ಆದರ್ಶ ನಾಗರೀಕ ಭಾವನೆಯಿಂದ ಯಾವ ಕಾರ್ಯವನ್ನು ಮಾಡಿದರೂ ಅದನ್ನು ಪರಿಪೂರ್ಣವಾಗಿ ಮಾಡಬಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಬ್ರಿಟಿಷ್ ರಾಜ್ಯದ ಪ್ರಜೆಯಾಗಿದ್ದ ನಾವು ಸ್ವಾತಂತ್ರ್ಯವನ್ನು ಗಳಿಸಿ ನಾಗರೀಕರಾಗಿದ್ದೇವೆ. ಅದರ ಅರಿವು ನಮಗಾಗಬೇಕು ಎನ್ನುವದೇ ಸ್ವಾಮಿ ರಂಗನಾಥಾನಂದಜಿಯವರ ವಿಚಾರದ ತಿರುಳು" ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜಿಯವರು ಮಾತನಾಡುತ್ತಾ, ಶ್ರೀರಾಮಕೃಷ್ಣ-ಶ್ರೀಶಾರದಾದೇವಿ-ಸ್ವಾಮಿ ವಿವೇಕಾನಂದ ಎಂಬ ತ್ರಿವೇಣಿಸಂಗಮದಲ್ಲಿ ಮಹಾಮಾತೆ ಶ್ರೀಶಾರದಾದೇವಿಯವರದು ಗುಪ್ತಗಾಮಿನಿಯ ಪಾತ್ರ ಎಂದರು.

ಕನ್ನಡದಲ್ಲಿ ವಿಶೇಷ ಉಪನ್ಯಾಸ ಮಾಡಿದ ಡಾ. ಎಚ್.ಎಸ್. ಮುರಳೀಧರ ಅವರು ಶ್ರೀಮಾತೆಯವರು ಇಡೀ ಜಗತ್ತನ್ನು ನಿನ್ನದಾಗಿಸಿಕೊಳ್ಳಲು ಕಲಿ ಎಂಬ ಸಂದೇಶವು ಶೂನ್ಯದಲ್ಲಿ ಹುಟ್ಟಿಕೊಂಡದ್ದಲ್ಲ, ಸಹಜವಾದ, ಸರಳವಾದ, ಪರಕೀಯವಲ್ಲದ, ಸೃಷ್ಟಿಯ ಎಲ್ಲದರೊಡನೆ ಅವರಿಗಿದ್ದ ಆತ್ಮೀಯವಾದ ಸಂಬಂಧದ ಫಲವಾಗಿತ್ತು ಎಂದರು. ಶ್ರೀಮಾ ದರ್ಶನ ಎಂದರೆ ಕೇವಲ ತಾಯಿಯನ್ನು ನೋಡುವುದಲ್ಲ, ತಾಯಿಯ ಭಾವನೆಯಿಂದ ಈ ಜಗತ್ತನ್ನು ಸಮಗ್ರದೃಷ್ಟಿ ಕೋಣದಿಂದ ನೋಡುವುದು ಎಂದರು. ಶ್ರೀಮಾತೆಯವರ ಮಾತುಗಳು ಧ್ವನ್ಯಾತ್ಮಕವಾದವುಗಳಲ್ಲ, ಅವು ನೇರವಾಗಿ ಹೃದಯ ದಿಂದ ಬಂದವು ಎಂದು ವಿಶ್ಲೇಷಿಸಿದರು.

ಈ ಮುಂಚೆ ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರು ಎಲ್ಲರನ್ನೂ ಸ್ವಾಗತಿಸುತ್ತಾ ಶ್ರೀಮಾ ಶಾರದಾ ಚಿತ್ರಪ್ರದರ್ಶನದ ಯೋಜನೆಯ ಬಗ್ಗೆ ವಿಸ್ತಾರವಾಗಿ ತಿಳಿಸಿದರು. •

## ವಿಜಯವಾಡದಲ್ಲಿ "ಶಾರದಾ ಸದನಂ" ಪ್ರಾರಂಭೋತ್ಸವ

ಫೆಬ್ರವರಿ ೬, ೨೦೦೪ರಂದು ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜೀಯವರು ಗುಂಟೂರು ಜಿಲ್ಲಾ, ತಾಡೆಪಲ್ಲಿ ಮಂಡಲಂ (ಆಂಧ್ರಪ್ರದೇಶ) ವಿಜಯವಾಡ ಶಾಖೆಗೆ ಸಂಬಂಧಿಸಿದ "ಶಾರದಾ ಸದನಂ" (ಸಾಧು ನಿವಾಸ, ಪ್ರಾರ್ಥನಾಮಂದಿರ, ಅಡುಗೆ ಮನೆ ಮತ್ತು ಭೋಜನ ಶಾಲೆ) ಭವನವನ್ನು ಉದ್ಘಾಟಿಸಿದರು. ನಂತರ ಸಾರ್ವಜನಿಕ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ ಮಿಷನ್ ಶಾಖೆಯು ಪ್ರಾರಂಭಿಸಿದ ಮೂರು ವರ್ಷಗಳಲ್ಲಿಯೇ ನಿರ್ಮಾಣಗೊಂಡ "ಶಾರದಾ ಸದನಂ" ಭವನದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ವಿಜಯವಾಡ ರಾಮಕೃಷ್ಣ ಮಿಷನ್ ಕಾರ್ಯದರ್ಶಿಗಳಾದ ಸ್ವಾಮಿ ಶಶಿಕಾಂತಾನಂದಜೀಯವರು ನಿಃಸ್ವಾರ್ಥಸೇವೆ ಸಲ್ಲಿಸಿದ ಭಕ್ತರನ್ನು ಅಭಿನಂದಿಸಿದರು. ಆಂಧ್ರಪ್ರದೇಶದ ವಿವಿಧಸ್ಥಳಗಳಿಂದ ಸಂನ್ಯಾಸಿಗಳು, ಭಕ್ತರು, ಶ್ರೇಯೋಭಿಲಾಷಿಗಳು, ಸೀತಾನಗರದ ರಾಮಕೃಷ್ಣ ಮಿಷನ್ ಪ್ರೌಢಶಾಲೆಯ ಅಧ್ಯಾಪಕ ವೃಂದದವರು, ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ಸೇರಿ ಸುಮಾರು ೧೫೦೦ ಮಂದಿ ಈ ಉತ್ಸವದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಭಗವಾನ್ ಶ್ರೀರಾಮಕೃಷ್ಣರ ದೇಗುಲದಲ್ಲಿ ವಿಶೇಷಪೂಜೆ, ಹೋಮ, ಮತ್ತು ಭಜನೆ ಜರುಗಿದವು. ◆

## ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ

ಹೈದರಾಬಾದ್‌ನ ರಾಮಕೃಷ್ಣ ಮಠದ ಅಂಗಸಂಸ್ಥೆಯಾದ "ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆ" ಮಾನವ ಸಂಪನ್ಮೂಲದ ಸಂವರ್ಧನೆಗಾಗಿ ಕಳೆದ ಒಂದು ವರ್ಷದಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡು ಸುಮಾರು ೫೮,೩೦೪ ಜನರಿಗೆ ಸೇವೆ ಸಲ್ಲಿಸಿದೆ. ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ, ಉದ್ಯಮಿಗಳಿಗೆ, ಪಂಚಾಯತಿ ರಾಜ್ ನೌಕರರಿಗೆ ಮೌಲ್ಯಾಧಾರಿತ ಪ್ರಶಿಕ್ಷಣ, ಯುವ ಜನತೆಯ, ಭಕ್ತರ, ಹಾಗೂ ಅಧ್ಯಾಪಕರ ಸಮ್ಮೇಳನಗಳು, ಯುವ ಜನತೆಗೆ ವ್ಯಕ್ತಿತ್ವವಿಕಸನ ಕಾರ್ಯಕ್ರಮ, ಶಿಬಿರಗಳು, ಯೋಗ, ಯುವ ಜನತೆಗೆ ಧ್ಯಾನದ ಕಲೆ, ಇವಿಷ್ಟೇ ಅಲ್ಲದೆ ಲಲಿತಕಲೆಗಳಲ್ಲಿ ತರಬೇತಿಯ ತರಗತಿಗಳು—ಇವೇ ಮೊದಲಾದ ಕಾರ್ಯಕ್ರಮಗಳಲ್ಲಿ ಸಾಮಾನ್ಯಜನತೆ ಪಾಲ್ಗೊಂಡು ಅವುಗಳ ಉಪಯೋಗವನ್ನು ಪಡೆದರು.

ಅಂಕಿ ಅಂಶಗಳ ಪ್ರಕಾರ ಯುವಕರಿಗಾಗಿನ ವಿಶೇಷ ಕಾರ್ಯಕ್ರಮಗಳಲ್ಲಿ ೩೬,೬೭೧ ಯುವಕ ಯುವತಿಯರು ಮಾರ್ಚ್ ೩೧ಕ್ಕೆ ಕೊನೆಗೊಂಡ ಕಳೆದ ಒಂದುವರ್ಷದಲ್ಲಿ ಪಾಲ್ಗೊಂಡಿದ್ದಾರೆ. ವ್ಯಕ್ತಿತ್ವ ವಿಕಸನ ಮತ್ತು ಯೋಗ ತರಗತಿಗಳಲ್ಲಿ ಕ್ರಮವಾಗಿ ೨೦೩೬ ಮತ್ತು ೧೩೩೩ ಜನ ಪಾಲ್ಗೊಂಡಿದ್ದರೆ, ಆಶ್ರಮದ ಆವರಣದಲ್ಲಿಯೆ ಇರುವ ಸಂತದರ್ಶನ ಮತ್ತು ಗೀತಾದರ್ಶನ ಚಿತ್ರಪ್ರದರ್ಶನಗಳನ್ನು ೩೧,೩೦೬ ಜನ ವೀಕ್ಷಿಸಿ ಆನಂದ ಪಟ್ಟಿದ್ದಾರೆ. ◆


# SAMATHA BOOKS

10, CONGRESS BUILDINGS, 573, ANNA SALAI, TEYNAMPET, CHENNAI - 600 006
Telephone: 044 -24349216 Website: w.w.w. Samatabooks.com • Email: veluryk@yahoo.com

## *SAMATA SERIES OF SPIRITUAL CLASSICS*

SANSKRIT PUBLICATIONS :

1. Complete Works of Sri Sankaracharya in the Original Sanksrit - 10 Volumes — Rs. 4,000
2. Complete Works of Sri Sankaracharya in the Original Sanksrit - Volume 1 - Stotras — Rs. 200

### SANSKRIT TEXT WITH ENGLISH TRANSLATION

| | |
|---|---|
| 3. *The Bhagavad Gita with the commentary* of Sri Sankaracharya -by A.M.Sastri | Rs. 300 |
| 4. Dakshinamurti Stotra with Manasollasa and Pranava Vartika | Rs.150 |
| 5. Prabodhasudhakara | Rs.100 |
| 6. The Taittiriya Upanishad | Rs.400 |
| 7. Jnaneshwari by Bhagwat | Rs.300 |
| 8 Amritanubhava by Jnanadeva | Rs.100 |
| 9. The Essence of Yogavashishta | Rs.300 |
| 10. Bhikshugita | Rs.100 |
| 11. The Vision and the way of Vasishta | Rs.300 |
| 12. Srimad Bhagavad Gita -Sri Vasishtha's Version | Rs. 50 |

### ENGLISH PUBLICATIONS

| | |
|---|---|
| 13. The Gospel of Buddha | Rs.175 |
| 14. Satisaptamam by K.R.Srinivasa Iyengar | Rs.400 |
| 15. The Practice of the Presence of God | Rs.100 |
| 16. Krishna Geetam | Rs.300 |
| 17. Buddhiyoga of the Gita by Anirvan | Rs.100 |
| 18. Stotramala | Rs.100 |
| 19. "The Dedicated " - A Biography of Nivedita | Rs.150 |
| 20. The Economy of Human Life | Rs.100 |
| 21. Sri Chakra | Rs.120 |
| 22. Ten Great Cosmic Powers | Rs.120 |
| 23. Natures Finer Forces | Rs.200 |
| 24. He Can Who Thinks He Can | Rs.80 |
| 25.Preceptors of Advaita | Rs.350 |

**We also stock and sell Books on Indology, Philosophy and Religion.**


*Managing Editor: Swami Atmavidananda* *Editor: Swami Nityasthananda*

*Printed by Sri J. B. Pattabhi and Published by Swami Atmavidananda, on behalf of Sri Ramakrishna Ashrama, Yadavagiri, Mysore and Printed at Pattabhi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore*